**<u>ದಿನಾಂಕಃ 30.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಹೆಚ್.ಕೆ. ವಕೀಲರಿಂದಃ-</u>

1) ನಾನು ಅವಿದ್ಯಾವಂತೆ. ಪ್ರಸ್ತುತ ದಾವೆ ಯಾವ ವಿಚಾರಕ್ಕೆ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿದೆ. ಪ್ರಸ್ತುತ ದಾವೆ ದಾಖಲಿಸುವ ಸಂದರ್ಭದಲ್ಲಿ ದಾಖಲಾತಿಗಳನ್ನು ನಮ್ಮ ವಕೀಲರಿಗೆ ನಾನೇ ಕೊಟ್ಟಿರುವುದು. ದಾವಾ ಸ್ವತ್ತಿನ ಸರ್ವೆ ನಂ.82 ರ ವಿಸ್ತೀರ್ಣ 2 ಎಕರೆ 6 ಗುಂಟೆ. ಸದರಿ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನನ್ನ ತಮ್ಮ ರಾಮಸ್ವಾಮಿ ದಾನ ಪತ್ರದ ಮೂಲಕ ನನಗೆ ನೀಡಿದ್ದಾರೆ. ದಾವಾ ಸ್ವತ್ತು ನಮ್ಮ ತಾತನಿಗೆ ಸೇರಿದ ಸ್ವತ್ತು. ನಮ್ಮ ತಾತನಿಗೆ ಸೇರಿದ ಸ್ವತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ದಾನ ಪತ್ರ ನನಗೆ ಬರೆದುಕೊಡುವ ಸಮಯದಲ್ಲಿ ನಮ್ಮ ತಂದೆ ಮರಣಹೊಂದಿದ್ದರು ನಮ್ಮ ತಾಯಿ ಬದುಕಿದ್ದರು. ನಾವು ನಮ್ಮ ತಂದೆಗೆ ಒಟ್ಟು 5 ಜನ ಮಕ್ಕಳು ಅವರುಗಳೆಂದರೆ ರಾಮಸ್ವಾಮಿ, ಚಂದ್ರು, ನಿಂಗರಾಜು, ನಾನು ಹಾಗೂ ಸುಧಾ.

2) ನಿಪಿ.1 ದಾನಪತ್ರದಲ್ಲಿ ಯಾವ ಮೂಲಕ ಸ್ವತ್ತು ನಿಮ್ಮ ತಮ್ಮನಿಗೆ ಬಂತು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಾತನ ಸ್ವತ್ತು ನಮ್ಮ ತಮ್ಮನ ಹೆಸರಿನಲ್ಲಿ ಮಾಡಿಕೊಂಡಿದ್ದು ನಂತರ ನನಗೆ ಸದರಿ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರರು ಮತ್ತು ಸಹೋದರಿಯರು ಸಹಾ ನಿಪಿ.1 ದಾನಪತ್ರಕ್ಕೆ ಸಹಿ ಮಾಡಿದ್ದಾರೆ. ನಿಮ್ಮ ಸಹೋದರರು ಮತ್ತು ಸಹೋದರಿಯರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ರಾಮಸ್ವಾಮಿ ಒಬ್ಬರಿಗೇ ದಾನಪತ್ರ ಮಾಡಿಕೊಡಲು ಅಧಿಕಾರವಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ನಾನು 8 ಲಕ್ಷ ಹಣ ನೀಡಿದ್ದು ಅದನ್ನು ತೀರಿಸಲವ ಸಲುವಾಗಿ ಹಾಗೂ ಅರಿಶಿನ ಕುಂಕುಮಕ್ಕಾಗಿ ದಾನಪತ್ರ ಬರೆದುಕೊಟ್ಟಿದ್ದಾರೆ.

3) ಕ್ರಯ ಪತ್ರ ಬರೆಸಿಕೊಳ್ಳಲು ನಿಮಗೆ ಏನಾದರೂ ತೊಂದರೆ ಇತ್ತೇ ಎಂದರೆ ಇಲ್ಲ. ದಾವಾ ಸ್ವತ್ತು ಗೋಮಾಳ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಗೋಮಾಳ ಸ್ವತ್ತು ಅದಕ್ಕೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ

ಸರಿಯಲ್ಲ. ನನ್ನ ತಮ್ಮ ರಾಮಸ್ವಾಮಿ ಅಕ್ರಮವಾಗಿ ದಾಖಲಾತಿ ಮಾಡಿಸಿಕೊಂಡು ನನಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಸೇರಿದ ಸ್ವತ್ತಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಮ್ಮ ತಾತನ ಹೆಸರಿನಲ್ಲಿರುವ ಯಾವುದಾದರೂ ದಾಖಲಾತಿಗಳು ಎಂದರೆ ಪಹಣಿ ಪತ್ರಿಕೆ, ಮ್ಯುಟೇಶನ್ ಮತ್ತು ಪಟ್ಟಾ ಪುಸ್ತಕ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುಯುತ್ತಾರೆ.

4) ನಿಪಿ.2 ರ ಪ್ರಕಾರ ದಾವಾ ಸ್ವತ್ತಿನಲ್ಲಿ ಯಾವುದೇ ಬೆಳೆ ಇಲ್ಲ ಎಂದರೆ ಸಾಕ್ಷಿ ಮಾವಿನ ಗಿಡ ಮತ್ತು ತೆಂಗಿನ ಗಿಡ ಹಾಕುತ್ತೇವೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಕೆಲವು ಛಾಯಾ ಚಿತ್ರಗಳನ್ನು ತೋರಿಸಿ ಅದರಲ್ಲಿರುವವರು ಪ್ರತಿವಾಗಳು ಎಂದು ಗುರುತಿಸಿದ ಕಾರಣ ಅವುಗಳನ್ನು ನಿಡಿ.1 ರಿಂದ 7 ಎಂದು ಗುರುತಿಸಲಾಯಿತು. ಸದರಿ ನಿಡಿ.1 ರಿಂದ 7 ಛಾಯಾ ಚಿತ್ರಗಲ್ಲಿ ತೆಂಗಿನ ಗಿಡ ಮತ್ತು ಮಾವಿನ ಗಿಡಗಳು ಕಾಣುತ್ತಿವೆ ಎಂದರೆ ಸರಿ. ನಿಡಿ.1 ರಿಂದ 7 ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಜಮೀನಿನ ನಡುವೆ ನೀರು ಹೋಗುವ ಒಂದು ಕಾಲುವೆ ಇದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ